CC No. 7/2020 DW1

**ದಿಃ 20.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಪಾಟೀ ಸವಾಲುಃ ಪಿರ್ಯಾದಿದಾರರ ಪರ ವಕಿಲರಿಂದಃ**

ಸೊಸೈಟಿಯಿಂದ ಪಿರ್ಯಾದಿದಾರರಿಗೆ 2 ಲಕ್ಷ ಸಾಲವನ್ನು ಕೊಡಿಸಿರುತ್ತೇನೆ. 2018-19 ರಲ್ಲಿ ಕೊಡಿಸಿರುತ್ತೇನೆ. ಮೊದಲಿಗೆ ಸಾಲದ ಹಣವನ್ನು ಕಟ್ಟುತ್ತಿದ್ದರು. 50-60 ಸಾವಿರ ರೂಗಳನ್ನು ಕಟ್ಟಿರಬಹುದು. 2018-19 ರಲಿಲ 50 ಸಾವಿರ ಕಟ್ಟಿರುತ್ತಾರೆ. ನಂತರ ಇಲ್ಲ ಎಂದು ಮಾಹಿತಿ ಬಂದಿದ್ದು . 2019 ರಲ್ಲಿ ವಿಚಾರಿಸಿರುತ್ತೇನೆ. ಕೆಲಸ ಮಾಡುವವರನ್ನು ವಿಚಾರಿಸಿರುತ್ತೇನೆ. ಆ ದಿನ ಅಧ್ಯಕ್ಷರು ಇರಲಿಲ್ಲ. ಅವರನ್ನು ನೋಡಿರುತ್ತೇನೆ ಪರಿಚಯ ಇಲ್ಲ. ಸೊಸೈಟಿಯಿಂದ ಸಾಲ ಕೊಡಬೇಕಾದರೆ ಅಧ್ಯಕ್ಷರು ಹೇಳಿದರೆ ಮಾತ್ರ ಕೊಡುತ್ತಾರೆ. ಅಧ್ಯಕ್ಷರು ಹೇಳಿದ ಮೇರೆಗೆ ನಾನು ಶ್ಯುರಿಟಿ ಆಗಿ ನಿಂತಿರುತ್ತೇನೆ. ನಾನು ಸಾಲವನ್ನು ಕೊಡಿಸಲು ಜೊತೆಯಲ್ಲಿ ಹೋಗಿರುತ್ತೇನೆ. ಆ ಕೇಸಿಗೂ ಈ ಚೆಕ್ ಬೌನ್ಸ್ ಕೇಸಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಅವರು ನನಗೆ ಹಣವನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ ಕೇಳಿ ಸರಿಯಾಗಿದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರದನ್ಯಾದಂ., ಚನ್ನರಾಯಪಟ್ಟಣ